## ಮಧ್ಯಂತರ ಅರ್ಜಿ ನಂ. 7 ರ ಮೇಲೆ ಆದೇಶ

1. ಅರ್ಜಿದಾರ/ ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –6 ನಿಯಮ– 17 ರಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ವಾದಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ 'ಗೋವಿಂದ ರಾಮಯ್ಯ ಶೆಟ್ಟಿ ' ಎನ್ನುವ ಸ್ಥಳದಲ್ಲಿ 'ಗೋವಿಂದ ರಾಮಯ್ಯ ಯಾನೆ ಅನಂತ ಶೆಟ್ಟಿ' ಎಂದು ತಿದ್ದುಪಡಿ ಕೋರಿ ಅರ್ಜಿಯಲ್ಲಿ ವಿನಂತಿಸಿರುತ್ತಾರೆ.

2. ಸದರಿ ಅರ್ಜಿಗೆ ಪೂರಕವಾಗಿ 6 ನೇ ಪ್ರತಿವಾದಿ ಪ್ರಮಾಣಪತ್ರವನ್ನು ಸಲ್ಲಿಸಿ ತನ್ನ ಅಜ್ಜನ ತಂದೆಗೆ 'ಅನಂತ' ಎಂದು ಸಹ ಕರೆಯುತ್ತಿರುವುದು ಹಾಗೂ ಆ ಕುರಿತು ದಾಖಲೆಗಳಿರುವುದು ತಮಗೆ ಇತ್ತೀಚೆಗೆ ಗೊತ್ತಾಗಿರುತ್ತದೆ. ಕಾರಣ ತಮ್ಮ ಅಜ್ಜನ ತಂದೆಯಾದ 'ರಾಮಯ್ಯ' ರವರಿಗೆ 'ಅನಂತ' ಎಂಬ ಇನ್ನೊಂದು ಹೆಸರು ಕರೆಯುತ್ತಿದ್ದ ಬಗ್ಗೆ ಈ ಮೊದಲು ತಮ್ಮ ತಿಳುವಳಿಕೆಯಲ್ಲಿರಲಿಲ್ಲ. ಆದ್ದರಿಂದ ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಸಹ ತಮ್ಮ ಅಜ್ಜನ ತಂದೆಯ ಹೆಸರು 'ರಾಮಯ್ಯ ಯಾನೆ ಅನಂತ' ಎಂದು ನಮೂದಿಸಲಾಗಿರಲಿಲ್ಲ. ಕಾರಣ ಈ ಕುರಿತು ವಾದಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ತಿದ್ದುಪಡಿ ಮಾಡಲು ಅನುಮತಿಸಬೇಕೆಂದು ವಿನಂತಿಸಿರುತ್ತಾರೆ. ಒಂದು ವೇಳೆ ಅರ್ಜಿಯಲ್ಲಿ ತಿಳಿಸಿದಂತೆ ಆದೇಶಿಸದಿದ್ದರೆ ವಾದಿಯರಿಗೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ. ಸದರಿ

ತಿದ್ದುಪಡಿಯು ದಾವೆ ಸ್ವರೂಪದಲ್ಲಿ ಬದಲಾವಣೆ ಉಂಟುಪಡಿಸುವುದಿಲ್ಲ. ಕಾರಣ ಅರ್ಜಿಯಲ್ಲಿ ಕೇಳಿದಂತೆ ವಿನಂತಿಯನ್ನು ಪುರಸ್ಕರಿಸಬೇಕೆಂದು ತಿಳಿಸಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿ ಪರ ತಕರಾರು ಸಲ್ಲಿಸಿ, ದಿಃ 26-10-2017 ರಂದು ವಾದಪತ್ರವನ್ನು ಸಲ್ಲಿಸಿರುತ್ತಾರೆ. ದಿಃ 22-1-2018 ರಂದು ಪ್ರತಿವಾದಪತ್ರ ಸಲ್ಲಿಸಿದ್ದು, ಅದರ ಮೇಲೆ ವಿವಾದಾಂಶವನ್ನು ಸಹ ರಚಿಸಲಾಗಿದೆ. ಸದರಿ ಪ್ರತಿವಾದಿ ಸಲ್ಲಿಸಿದ ಪ್ರತಿವಾದಪತ್ರದಲ್ಲಿ 'ಗೋವಿಂದ ರಾಮಯ್ಯ ಶೆಟ್ಟಿ ' ಈತ ದಾವೆಗೆ ಸಂಬಂಧಪಡದ ವ್ಯಕ್ತಿ ಹಾಗೂ 'ಗೋವಿಂದ ರಾಮಯ್ಯ ಶೆಟ್ಟಿ ' ನ ವಾರಸುದಾರರೆಂದು ಹೇಳಿಕೊಳ್ಳುವ ವಾದಿಯರಿಗೆ ದಾವೆ ಸಲ್ಲಿಸುವ ಯಾವುದೇ ಹಕ್ಕಿರುವುದಿಲ್ಲವೆಂದು ಪ್ರಾಥಮಿಕ ಹಂತದಲ್ಲಿಯೇ ಸಲ್ಲಿಸಲಾಗಿದೆ.

4. ಮುಂದುವರೆದು ದಾವಾಸ್ತಿಗಳಿಗೆ 'ಗೋವಿಂದ ರಾಮಯ್ಯ ಶೆಟ್ಟಿ' ರವರು ವಾರಸುದಾರರು ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದು ಸಹ ಪ್ರತಿವಾದಪತ್ರದಲ್ಲಿ ಸಲ್ಲಿಸಿದ್ದಿರುತ್ತದೆ. ತದನಂತರದಲ್ಲಿ ವಾದಿಯರ ಪರ ಸಾಕ್ಷಿಯಲ್ಲಿಯೂ ಸಹ ತಾವು 'ಗೋವಿಂದ ರಾಮಯ್ಯ ಶೆಟ್ಟಿ ' ರವರ ವಾರಸುದಾರರಿರುತ್ತೇವೆಂದು ತಿಳಿಸಿರುತ್ತಾರೆ. ಪಿಡಬ್ಲ್ಯೂ-1 ರವರ ಪಾಟೀಸವಾಲಿನಲ್ಲಿ ದಾವಾಸ್ತಿಗಳು 'ಗೋವಿಂದ ಅನಂತ ಶೆಟ್ಟಿ' ರವರಿಗೆ ಸಂಬಂಧಪಟ್ಟವುಗಳಿದ್ದು, 'ಗೋವಿಂದ ರಾಮಯ್ಯ ಶೆಟ್ಟಿ ' ರವರ ಆಸ್ತಿಗಳಾಗಿರುವುದಿಲ್ಲವೆಂದು ಸೂಚಿಸಿದ

ನಂತರ ವಾದಿಯರ ಪರ ತಕ್ಷಣ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದು ಹಾಸ್ಯಾಸ್ಪದವಾಗಿರುತ್ತದೆ. ಒಂದು ವೇಳೆ ಅರ್ಜಿಯಲ್ಲಿ ಕೇಳಿದಂತೆ ತಿದ್ದುಪಡಿಗೆ ಅವಕಾಶ ನೀಡಿದರೆ ಪ್ರತಿವಾದಿಯರ ಪ್ರತಿರಕ್ಷಣಾ ಹೇಳಿಕೆಗೆ ಧಕ್ಕೆ ಬರುತ್ತದೆ. ಸದರಿ ತಿದ್ದುಪಡಿ ಯಾವ ಕಾರಣಕ್ಕಾಗಿ ಅವಶ್ಯಕತೆ ಇದೆ ಮತ್ತು ಆ ಕುರಿತು ಆದ ವಿಳಂಬದ ಕುರಿತು ಸಮಂಜಸವಾಗಿ ವಿವರಿಸಿರುವುದಿಲ್ಲ. ಈಗಾಗಲೇ ದಾವಾಸ್ತಿ ಮೇಲೆ ವಾದಿಯರಿಗೆ ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇರುವುದಿಲ್ಲವೆಂದು ಹಾಗೂ 'ಗೋವಿಂದ ರಾಮಯ್ಯ ಶೆಟ್ಟಿ ' ರವರ ವಾರಸುದಾರರು ದಾವಾಸ್ತಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದು ಪ್ರತಿವಾದಪತ್ರದಲ್ಲಿ ತಿಳಿಸಿದ್ದರೂ ಸಹ ಅರ್ಜಿಯಲ್ಲಿ ತಿಳಿಸಿದಂತೆ ತನಗೆ ಈ ಮೊದಲು ಗೊತ್ತಿರಲಿಲ್ಲ ಎಂಬುವ ವಾದ ಊರ್ಜಿತಗೊಳ್ಳುವುದಿಲ್ಲ. ಸದರಿ ಅರ್ಜಿಯು ಕಾಲಪರಿಮಿತಿಯಲ್ಲಿರುವುದಿಲ್ಲ. ಒಂದು ವೇಳೆ ತಿದ್ದುಪಡಿ ಆದೇಶ ಮಾಡಿದರೆ ದಾವೆಯ ಸ್ವರೂಪವನ್ನೇ ಬದಲಿಸಿದಂತಾಗುತ್ತದೆ ಹಾಗೂ ಪ್ರತಿರಕ್ಷಣಾ ಹೇಳಿಕೆಗೆ ಪೂರಕವಾಗಿ ಸಾಕ್ಷಿ ನುಡಿದ ವಾದಿಯ ಪಾಟೀಸವಾಲಿನ ಹೇಳಿಕೆಗಳಿಗೆ ಧಕ್ಕೆ ಉಂಟಾಗುತ್ತದೆಂದು ತಿಳಿಸಿ ತಿದ್ದುಪಡಿ ಅರ್ಜಿಗಳನ್ನು ಯಾವ ತತ್ವಗಳಡಿಯಲ್ಲಿ ಪರಿಗಣಿಸಬೇಕೆಂದು ಅಂಶಗಳ ಮುಖಾಂತರ ತಿಳಿಸಿ ಅರ್ಜಿ ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

5. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ..........

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿಯರು ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

**6.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

**7.** **ಅಂಶ ನಂ.1**:- ವಾದಿಯರು 'ಗೋವಿಂದ ರಾಮಯ್ಯ ಶೆಟ್ಟಿ' ರವರ ವಾರಸುದಾರರಿರುತ್ತೇವೆಂದು ಠರಾಯಿಸಿ ದಿಃ 18-05-2002 ರಂದು ಆದ ಖರೀದಿಪತ್ರ ಹಾಗೂ ದಿಃ 13-08-1986 ರಂದು ಆದ ನೋಂದಾಯಿತ ಮೃತ್ಯುಪತ್ರ ರದ್ಧತಿ ಕೇಳಿ ಹಾಗೂ ದಾವಾ ಅನುಸೂಚಿಯಲ್ಲಿ ಕ್ರಮ ಸಂಖ್ಯೆ 2 ರಲ್ಲಿ ತಿಳಿಸಿದ ಆಸ್ತಿಯ ಕಬ್ಜೆ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ದಾವೆಯಲ್ಲಿ ಪ್ರಕರಣವನ್ನು ವಾದ-ವಿವಾದಕ್ಕಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ.

**8.** 'ಗೋವಿಂದ ರಾಮಯ್ಯ ಶೆಟ್ಟಿ' ವಾದಿಯರ ಕುಟುಂಬದ ಮೂಲ ಪುರುಷನಿದ್ದು, ಆತನಿಗೆ ಕಲ್ಯಾಣಿ ಮತ್ತು ನಾಗಮ್ಮ ಎಂಬುವ ಹೆಂಡತಿಯರಿದ್ದು, ಅವರೆಲ್ಲ ಮೃತಪಟ್ಟಿರುತ್ತಾರೆ. ವಾದಿಯರು ಕಲ್ಯಾಣಿಯ ಮಗನಾದ ಅನಂತ ರವರ

ವಾರಸುದಾರರಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು ಸದರಿ 'ಗೋವಿಂದ ರಾಮಯ್ಯ ಶೆಟ್ಟಿ ' ರವರು ದಾವಾಸ್ತಿಯನ್ನು ಮೂಲ ಗೇಣಿ ಆಧಾರದ ಮೇಲೆ ಪಡೆದಿದ್ದು, ಆತನ ಮರಣಾನಂತರ ಆತನ ಮೊದಲನೆ ಹೆಂಡತಿ ಹಾಗೂ 2 ನೇ ಹೆಂಡತಿಗಳಾದ ಕಲ್ಯಾಣಿ ಮತ್ತು ನಾಗಮ್ಮ ರವರಿಗೆ ವಾರಸುದಾರನಾತೆಯಿಂದ ಮುಂದುವರೆದಿದ್ದರಿಂದ ಅದು ಕುಟುಂಬದ ಆಸ್ತಿಯಾಗಿರುತ್ತದೆಂದು ತಿಳಿಸಿರುತ್ತಾರೆ.

**9.** ಮುಂದುವರೆದು ಸದರಿ ದಾವಾ ಸಂಪೂರ್ಣ ಆಸ್ತಿಗಳು ನಾಗಮ್ಮ ಗೋವಿಂದ ಶೆಟ್ಟಿ ರವರು ಸಂಪೂರ್ಣ ಮಾಲ್ಕಿ ಹಕ್ಕಿನ ಆಸ್ತಿಗಳೆರದಿದ್ದರೂ ಸಹ ಪ್ರತಿವಾದಿ ತಂದೆಯು ಮೃತ ನಾಗಮ್ಮ ಗೋವಿಂದ ಶೆಟ್ಟಿ ರವರ ಮನೆಯ ಹತ್ತಿರ ವಾಸಿಸುತ್ತಿದ್ದರ ಗೈರುಫಾಯ್ದೆ ಪಡೆದು ಆಸ್ತಿಯನ್ನು ಕಬಳಿಸಬೇಕೆನ್ನುವ ದುರುದ್ದೇಶದಿಂದ ದಿಃ 18–8–1986 ರಂದು ಜೆಪಿಎ ಯನ್ನು, ದಿಃ 13–8–1986 ರಂದು ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಮೃತ್ಯುಪತ್ರವನ್ನು ಬರೆದಿರುವುದನ್ನು 1986 ರಂದು ನೋಂದಾಯಿಸಿರುತ್ತಾರೆ. ಸದರಿ ಸಂಗತಿಗಳನ್ನು ಪ್ರತಿವಾದಿ ಪರ ಅಲ್ಲಗಳೆದಿದ್ದು, ದಾವೆಯಲ್ಲಿ ತಿಳಿಸಿದ ವಂಶಾವಳಿಯನ್ನು ಹಾಗೂ ದಾವಾಸ್ತಿ ವಾದಿಯರ ಕುಟುಂಬಕ್ಕೆ ಸಂಬಂಧಪಟ್ಟಿರುತ್ತದೆ ಎಂಬುವ ಸಂಗತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ದಾವೆಯಲ್ಲಿ ವಿವಾದಾಂಶ ರಚಿಸಿದ ನಂತರ 6 ನೇ ವಾದಿಯು ಪಿಡಬ್ಲ್ಯೂ–1 ಎಂದು ಸಾಕ್ಷಿ ನುಡಿದಿದ್ದು, ಅವರಿಗೆ ದಾವೆಯಲ್ಲಿ ಮೂಲ ದಾವೆ ನಂ. 80/1986 ರಲ್ಲಿ ತಿಳಿಸಿದ 'ಗೋವಿಂದ ಅನಂತ ಶೆಟ್ಟಿ' ಹಾಗೂ ಈ

ದಾವೆಯಲ್ಲಿ ತಿಳಿಸಿದ 'ಗೋವಿಂದ ರಾಮಯ್ಯ ಶೆಟ್ಟಿ ' ಬೇರೆ ಬೇರೆ ಎಂದು ಸೂಚಿಸಿದ್ದು, ಅದರ ಆಧಾರದ ಮೇಲಿಂದ ದಾಖಲೆಗಳನ್ನು ಸಹ ತೋರಿಸಿ ಪಾಟೀಸವಾಲಿಗೆ ಒಳಪಡಿಸಿರುತ್ತಾರೆ. ತದನಂತರದಲ್ಲಿ ಪ್ರಸ್ತುತ ಅರ್ಜಿಯನ್ನು ವಾದಿಯರ ಪರ ಸಲ್ಲಿಸಲಾಗಿದೆ.

10. ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ -6 ನಿಯಮ -17 ರ ಪ್ರಕಾರ ದಾವೆಯ ಯಾವುದೇ ಹಂತದಲ್ಲಿ ವಿವಾಧ್ಯದಲ್ಲಿರುವ ಸಂಗತಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂತಹ ಎಲ್ಲ ದುರಸ್ತುಗಳನ್ನು ಮಾಡಲು ಪಕ್ಷಗಾರರಿಗೆ ಅವಕಾಶವಿದ್ದು, ಅಂತಹ ತಿದ್ದುಪಡಿಯು ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಸಹ ವಿಚಾರಣೆ ಪ್ರಾರಂಭದ ಪೂರ್ವದಲ್ಲಿ ಅಂತಹ ತಿದ್ದುಪಡಿ ಮಾಡಲು ಆಗಿರುವುದಿಲ್ಲ ಎಂಬುವುದನ್ನು ಸಾಬೀತುಪಡಿಸಬೇಕಾಗಿರುತ್ತದೆಂದು ಸ್ಪಷ್ಟಪಡಿಸುತ್ತದೆ.

11. ಪಕ್ಷಗಾರರು ವಾದ-ಪ್ರತಿವಾದಪತ್ರದಲ್ಲಿ ತಿದ್ದುಪಡಿ ಸಲುವಾಗಿ ಸಲ್ಲಿಸುವ ಅರ್ಜಿಗಳನ್ನು ಅಂತಹ ತಿದ್ದುಪಡಿಯಿಂದ ನ್ಯಾಯದ ವಿಫಲತೆಯಾಗುತ್ತದೆಂದು ಮನದಟ್ಟಾಗದ ಹೊರತು ತಿರಸ್ಕರಿಸಲು ಅವಕಾಶವಿರುವುದಿಲ್ಲ. ಸದರಿ ಸಿದ್ಧಾಂತವು ಸ್ವಾಭಾವಿಕ ನ್ಯಾಯದ ತತ್ವವನ್ನು ಆಧರಿಸಿದ್ದು, ನ್ಯಾಯದ ವಿಫಲತೆಯನ್ನು ತಡೆಯುವ ಉದ್ದೇಶ ಹೊಂದಿದೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಒಂದು ವೇಳೆ ಪ್ರತಿವಾದಿಗೆ

ದೊರೆತ ಹಕ್ಕನ್ನು ಕಸಿದುಕೊಳ್ಳಲು ಅಥವಾ ಸಂಪೂರ್ಣವಾಗಿ ಹೊಸದಾದ ಅಥವಾ ವೈಪರಿತ್ಯವಾದ ಬೇರೆಯ ವಾದವನ್ನೇ ಎತ್ತುವಂತಿರುವಲ್ಲಿ ಅಥವಾ ವ್ಯಾಜ್ಯ ಕಾರಣದ ಬದಲಿಗೆ ಹೊಸ ವ್ಯಾಜ್ಯ ಕಾರಣ ಸೇರಿಸಿ ದಾವೆಯ ಸ್ವರೂಪ ಬದಲಿಸುವ ದುರುದ್ದೇಶ ಅಥವಾ ತುಂಬಾ ವಿಳಂಬ ಮಾಡಿದಂತಹ ಸಂದರ್ಭಗಳಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಬೇಕಾಗುತ್ತದೆಂದು ಸ್ಪಷ್ಟಪಡಿಸುತ್ತದೆ.

12. ಮೂಲ ದಾವೆ ನಂ. 80/1986 ರಲ್ಲಿ ನಾಗಮ್ಮನ ಗಂಡನ ಹೆಸರನ್ನು 'ಗೋವಿಂದ ಅನಂತ ಶೆಟ್ಟಿ' ಎಂದು ಬರೆದಿದ್ದು, ಈ ದಾವೆಯಲ್ಲಿಯ 'ಗೋವಿಂದ ರಾಮಯ್ಯ ಶೆಟ್ಟಿ' ಹಾಗೂ ಮೂಲ ದಾವೆ ನಂ. 80/1986 ರಲ್ಲಿ ಬರೆದ 'ಗೋವಿಂದ ಅನಂತ ಶೆಟ್ಟಿ' ಬೇರೆ ಬೇರೆ ಎಂದು ಪ್ರತಿವಾದಿಯ ವಾದವಿರುತ್ತದೆ. ಪ್ರತಿಯಾಗಿ ಸದರಿ 'ಗೋವಿಂದ ರಾಮಯ್ಯ ಶೆಟ್ಟಿ' ಗೆ 'ಗೋವಿಂದ ರಾಮಯ್ಯ ಯಾನೆ ಅನಂತ ಶೆಟ್ಟಿ' ಎಂತಲೂ ಕರೆಯುತ್ತಿದ್ದರೆಂದು ತನಗೆ ಇತ್ತೀಚೆಗೆ ಗೊತ್ತಾಗಿದ್ದರಿಂದ ಆ ಕುರಿತು ವಾದಪತ್ರದಲ್ಲಿ ತಿದ್ದುಪಡಿಗೊಳಿಸುವ ಅನಿವಾರ್ಯತೆ ಉಂಟಾಗಿರುತ್ತದೆಂದು ವಾದಿಯರ ವಾದವಿರುತ್ತದೆ. ಪಕ್ಷಗಾರರ ಹೆಸರಿನ ಬಗ್ಗೆ ಹಾಗೂ ದಾವಾಸ್ತಿಗಳ ಕುರಿತಾಗಿ ಪಕ್ಷಗಾರರು ತಿಳಿಸುವ ಸಂಗತಿಗಳನ್ನು ಸಾಬೀತುಪಡಿಸುವ ಹೊಣೆಗಾರಿಕೆ ಆಯಾ ಪಕ್ಷಗಾರರ ಮೇಲೆ ಇರುತ್ತದೆ. ಅರ್ಜಿಯಲ್ಲಿ ತಿಳಿಸಿದ ವಿಷಯದ ಕುರಿತು ಪಿಡಬ್ಲ್ಯೂ-1 ರವರು ಪಾಟೀಸವಾಲಿಗೆ ಒಳಪಡಿಸಿದ ಮಾತ್ರಕ್ಕೆ ಪಕ್ಷಗಾರರ ಹೆಸರಿನಲ್ಲಾಗಲೀ ಅಥವಾ ದಾವಾಸ್ತಿಯಲ್ಲಾಗಲೀ

ಪೂರಕ ಸಾಕ್ಷ್ಯಾಧಾರವಿಲ್ಲದೇ ಯಾವುದೇ ಸಂಗತಿಗಳನ್ನು ಪರಿಗಣಿಸಲಾಗದು. ಕಾರಣ ಸದರಿ ತಿದ್ದುಪಡಿಯಿಂದ ದಾವೆಯ ಸ್ವರೂಪದಲ್ಲಾಗಲೀ ಅಥವಾ ಮೂಲದಲ್ಲಾಗಲೀ ಯಾವುದೇ ಬದಲಾವಣೆ ಉಂಟಾಗುವುದಿಲ್ಲ.

**13.** ದಾವಾಸ್ತಿ ಕುರಿತು ಪಕ್ಷಗಾರರ ಹಕ್ಕುಗಳನ್ನು ನಿರ್ಧರಿಸುವುದು ದಾವೆಯ ಮೂಲ ಉದ್ದೇಶವಿರುವುದರಿಂದ ಆ ಕುರಿತಾಗಿ ಎರಡು ಪಕ್ಷದವರು ನೀಡುವ ಸಂಗತಿ ಹಾಗೂ ಸಾಕ್ಷ್ಯಾಧಾರವನ್ನು ಪಡೆಯಲು ತಕರಾರಿನಲ್ಲಿ ತಿಳಿಸಿದ ಸಂಗತಿಗಳು ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ. ಆದರೆ ಅರ್ಜಿಯನ್ನು ಈ ಮೊದಲೇ ಸಲ್ಲಿಸುವ ಅವಕಾಶವಿತ್ತು ಎಂಬುವ ಸಂಗತಿಯನ್ನು ಅವಲೋಕಿಸಿದಾಗ ಅರ್ಜಿಯನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ಪ್ರತಿವಾದಿಯ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಕಾರಣ ಅಂಶ ನಂ. 1 ಕ್ಕೆ " **ಸಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

**14.** **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ಮಧ್ಯಂತರ ಅರ್ಜಿ ನಂ. 7 ನ್ನು ರೂ. 500/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು ದಿಃ 08-12-2023 ರಂದು ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**